# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ   Kannada Daily

ಹಾಸನ   E-mail : kannadapostnews@gmail.com   / ಕನ್ನಡ post   Price: ₹1

Vol.No.01 | Issue. 149 | Pages. 2 | Date: 16-04-2025, WEDNESDAY   RNI NO: KARKAN/2024/89601

ಸಂಪುಟ : 01 - ಸಂಚಿಕೆ : 149 - ಪುಟಗಳು : 2 - 16 ಏಪ್ರಿಲ್ 2025 ಬುಧವಾರ   Ph: 8762954248   ದರ : ₹1


# ಯಾರಾಗಲಿದ್ದಾರೆ ನಗರಸಭೆ ಉಪಾಧ್ಯಕ್ಷ?

## ಮುಂಚೂಣಿಯಲ್ಲಿ ಹೇಮಲತಾ ಕಮಲ್‌ಕುಮಾರ್ | ರೇವಣ್ಣ ನಿರ್ಧಾರದತ್ತ ಚಿತ್ತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಒಪ್ಪಂದದಂತೆ ಆರು ತಿಂಗಳಿಗೆ ಅಧಿಕಾರ ಬಿಟ್ಟುಕೊಡದ ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ ಅವರನ್ನು ಕೆಳಗಿಳಿಸಲೇಬೇಕೆಂದು ಪಣ ತೊಟ್ಟಿರುವ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರ ಪ್ರಕ್ರಿಯೆಯ ಮೊದಲ ಭಾಗ ಎಂಬಂತೆ ಉಪಾಧ್ಯಕ್ಷರ ಆಯ್ಕೆಗೆ ಮುಂದಾಗಿದ್ದು 5ನೇ ವಾರ್ಡ್‌ನ ಹೇಮಲತಾ ಕಮಲ್‌ಕುಮಾರ್‌ಗೆ ಅದೃಷ್ಟ ಒಲಿಯುವ ಸಾಧ್ಯತೆಗಳು ಹೆಚ್ಚಿವೆ.

ನಗರಸಭೆ ಸಭಾಂಗಣದಲ್ಲಿ ಏ. 16ರ ಬುಧವಾರ ಚುನಾವಣೆ ಪ್ರಕ್ರಿಯೆ ನಡೆಯಲಿದೆ. ಮಧ್ಯಾಹ್ನ 2 ಗಂಟೆಗೆ ಉಪಾಧ್ಯಕ್ಷರ ಆಯ್ಕೆ ಚುನಾವಣೆ ನಿಗದಿಯಾಗಿದ್ದು ಬೆಳಿಗ್ಗೆ 9 ಗಂಟೆಗೆ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಪ್ರವಾಸಿ ಮಂದಿರದಲ್ಲಿ ಸದಸ್ಯರ ಸಭೆ ಕರೆದಿದ್ದಾರೆ.

ಬೆಳಿಗ್ಗೆ 11 ಗಂಟೆಗೆ ಒಮ್ಮತದ ಅಭ್ಯರ್ಥಿ ನಾಮಪತ್ರ ಸಲ್ಲಿಸಲಿದ್ದಾರೆ. ಬಿಜೆಪಿ ಸದಸ್ಯರು ಸಹ ಹೇಮಲತಾ ಕಮಲ್‌ಕುಮಾರ್‌ಗೆ ಉಪಾಧ್ಯಕ್ಷ ಸ್ಥಾನ ನೀಡುವುದಾದರೆ ಬೆಂಬಲಿಸುವುದಾಗಿ ಘೋಷಿಸಿದ್ದಾರೆ. ಹೀಗಾಗಿ ಉಳಿದ ಅವಧಿಗೆ ಹೇಮಲತಾ ಅವರೇ ನಗರಸಭೆ ಉಪಾಧ್ಯಕ್ಷರಾಗಲಿದ್ದಾರೆ ಎನ್ನಲಾಗಿದೆ.




### ಅಧ್ಯಕ್ಷರ ಮಣಿಸಲು ಬಿಜೆಪಿ ಅನಿವಾರ್ಯ

ನಗರಸಭೆ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನ ಚುನಾವಣೆಯಲ್ಲಿ ಮೈತ್ರಿ ಒಪ್ಪದೆ ಅಧಿಕಾರ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದ ಜೆಡಿಎಸ್‌ಗೆ ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ ಅವರನ್ನು ಸ್ಥಾನದಿಂದ ಕೆಳಗಿಳಿಸಲು ಬಿಜೆಪಿ ಸಹಾಯ ಅನಿವಾರ್ಯವಾಗಿದೆ. ಹಾವು-ಮುಂಗುಸಿಯಂತಿರುವ ಬಿಜೆಪಿ ನಾಯಕರು ಜೆಡಿಎಸ್‌ನ ಕೋರಿಕೆಗೆ ಹೇಗೆ ಸ್ಪಂದಿಸುತ್ತಾರೆ ಎಂಬುದು ಕುತೂಹಲ ಕೆರಳಿಸಿದೆ.

### ಪಕ್ಷ ನಿಷ್ಠೆಗೆ ಮನ್ನಣೆ

2024ರ ಆಗಸ್ಟ್ 21 ರಂದು ನಡೆದಿದ್ದ ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆಯಲ್ಲೇ ಹೇಮಲತಾ ಕಮಲ್‌ಕುಮಾರ್ ಅವರನ್ನು ಪರಿಗಣಿಸಬೇಕಿತ್ತು. ಆದರೆ ಬಿಜೆಪಿಯಿಂದ ಗೆದ್ದು ಜೆಡಿಎಸ್ ಜೊತೆ ಗುರುತಿಸಿಕೊಂಡಿದ್ದ 35ನೇ ವಾರ್ಡ್‌ನ ಲತಾದೇವಿ ಸುರೇಶ್ ಅವರು ಉಪಾಧ್ಯಕ್ಷ ಸ್ಥಾನಕ್ಕಾಗಿ ಪಟ್ಟು ಹಿಡಿದಿದ್ದರು. ಒಂದು ವೇಳೆ ತಮ್ಮನ್ನು ಪರಿಗಣಿಸದಿದ್ದರೆ ಪಕ್ಷ ತೊರೆಯುವ ಬೆದರಿಕೆಯನ್ನು ಹಾಕಿದ್ದರು. ಹೀಗಾಗಿ ಜೆಡಿಎಸ್ ನಾಯಕರು ಹೇಮಲತಾ ಕಮಲ್‌ಕುಮಾರ್ ಅವರ ಮನವೊಲಿಸಿ ಉಪಾಧ್ಯಕ್ಷ ಸ್ಥಾನವನ್ನು ಲತಾದೇವಿ ಸುರೇಶ್ ಅವರಿಗೆ ನೀಡಿದ್ದರು ಎನ್ನಲಾಗಿದೆ.

ಈಗ ವರಿಷ್ಠರ ಸೂಚನೆಯಂತೆ ಲತಾದೇವಿ ರಾಜೀನಾಮೆ ನೀಡಿರುವುದರಿಂದ ಹೇಮಲತಾ ಅವರ ದಾರಿ ಸುಗಮವಾಗಿದೆ. ಉಪಾಧ್ಯಕ್ಷ ಹುದ್ದೆ ಕೈ ತಪ್ಪಿದಾಗಲೂ ಬೇಸರ ಮಾಡಿಕೊಳ್ಳದೆ ಪಕ್ಷನಿಷ್ಠೆ ಮೆರೆದ ಅವರ ನಡೆಗೆ ಜೆಡಿಎಸ್ ವರಿಷ್ಠರು ಈ ಬಾರಿ ಅವಕಾಶ ಮಾಡಿಕೊಡಲು ಉತ್ಸುಕತೆ ತೋರಿದ್ದಾರೆ ಎಂದು ತಿಳಿದುಬಂದಿದೆ.

### ನಗರಸಭೆ ಬಲಾಬಲ

35 ಸದಸ್ಯ ಬಲದ ನಗರಸಭೆಯಲ್ಲಿ 17 ಜೆಡಿಎಸ್, 14 ಬಿಜೆಪಿ, 2 ಕಾಂಗ್ರೆಸ್ ಹಾಗೂ ಇಬ್ಬರು ಪಕ್ಷೇತರ ಸದಸ್ಯರಿದ್ದಾರೆ. 2024ರ ಆಗಸ್ಟ್ 21 ರಂದು ನಡೆದ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನ ಚುನಾವಣೆಯಲ್ಲಿ ಶಾಸಕ ಹೆಚ್.ಪಿ. ಸ್ವರೂಪ್ ಸೇರಿ 34 ಮತಗಳು ಎಂ. ಚಂದ್ರೇಗೌಡ ಅವರಿಗೆ ಲಭಿಸಿದ್ದವು. ಆರು ತಿಂಗಳ ಬಳಿಕ ಅಧ್ಯಕ್ಷ ಸ್ಥಾನ ಬಿಟ್ಟುಕೊಡುವಂತೆ ಎಂ. ಚಂದ್ರೇಗೌಡರಿಗೆ ಸೂಚಿಸಲಾಗಿತ್ತು. ಆದರೆ ಅವರು ಪಕ್ಷದ ವರಿಷ್ಠರಿಗೆ ಸೆಡ್ಡು ಹೊಡೆದು ಇನ್ನು ನಾಲ್ಕು ತಿಂಗಳು ಅಧ್ಯಕ್ಷ ಸ್ಥಾನ ಬಿಟ್ಟುಕೊಡುವುದಿಲ್ಲ ಎನ್ನುವುದು ಅಧ್ಯಕ್ಷ ಸ್ಥಾನ ಆಕಾಂಕ್ಷಿತರ ಹಾಗೂ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರ ಕೆಂಗಣ್ಣಿಗೆ ಕಾರಣವಾಗಿದೆ. ಶತಾಯಗತಾಯ ಚಂದ್ರೇಗೌಡ ಅವರನ್ನು ಸ್ಥಾನದಿಂದ ಕೆಳಗಿಳಿಸಲೇಬೇಕೆಂದು ಅವರು ಪಣ ತೊಟ್ಟಿದ್ದಾರೆ. ಹೀಗಾಗಿ ನಗರಸಭೆ ರಾಜಕೀಯ ದಿನಕ್ಕೊಂದು ತಿರುವು ಪಡೆಯುತ್ತಿದೆ.

ನಗರಸಭೆ ಅಧ್ಯಕ್ಷರ ಆಯ್ಕೆಗೆ 18 ಸದಸ್ಯರ ಬೆಂಬಲ ಬೇಕು. ಶಾಸಕ ಹೆಚ್.ಪಿ. ಸ್ವರೂಪ್ ಅವರ ಮತ ಸೇರಿದರೆ ಅಷ್ಟು ಮತಗಳು ಜೆಡಿಎಸ್ ಬಳಿ ಇವೆ. ಆದರೆ ಅಧ್ಯಕ್ಷ ಸ್ಥಾನದಿಂದ ಚಂದ್ರೇಗೌಡ ಅವರನ್ನು ಕೆಳಗಿಳಿಸಲು 26 ಮತಗಳ ಅವಶ್ಯಕತೆ ಇರುವುದರಿಂದ ಬಿಜೆಪಿಯ ಸಹಕಾರ ಅವಶ್ಯವಾಗಿದೆ. ಆದ್ದರಿಂದಲೇ ಜೆಡಿಎಸ್ ವರಿಷ್ಠರು ಮೈತ್ರಿ ದಾಳ ಎಸೆಯಲು ಮುಂದಾಗಿದ್ದಾರೆ ಎನ್ನಲಾಗಿದೆ. 10 ತಿಂಗಳ ಬಳಿಕ ಅಧ್ಯಕ್ಷ ಸ್ಥಾನವನ್ನು ತಮಗೆ ಬಿಟ್ಟುಕೊಡಬೇಕೆಂದು ಪಟ್ಟು ಹಿಡಿದಿರುವ ಬಿಜೆಪಿಯವರು ಚಂದ್ರೇಗೌಡರ ವಿರುದ್ಧ ಮತ ಹಾಕುತ್ತಾರಾ ಎಂಬುದು ಯಕ್ಷ ಪ್ರಶ್ನೆಯಾಗಿದೆ.



### ಮುಸ್ಲಿರಿಂದಲೂ ಒತ್ತಡ

ಆರಂಭದಿಂದಲೂ ನಗರದಲ್ಲಿ ಜೆಡಿಎಸ್‌ಗೆ ಮುಸ್ಲಿಂ ಸಮುದಾಯದ ಬೆಂಬಲವಿದೆ. ಈಗಲಾದರೂ ಉಪಾಧ್ಯಕ್ಷ ಸ್ಥಾನಕ್ಕೆ ಮುಸ್ಲಿಂ ಮಹಿಳಾ ಸದಸ್ಯರನ್ನು ಪರಿಗಣಿಸಬೇಕೆಂಬ ಒತ್ತಡ ಕೇಳಿಬಂದಿದೆ. ಉಪಾಧ್ಯಕ್ಷ ಸ್ಥಾನಕ್ಕಾಗಿ ಪೈಪೋಟಿಯಲ್ಲಿರುವ ಸದಸ್ಯರ ಸಂಖ್ಯೆ ಹೆಚ್ಚಿದೆ.

ಸೋಮವಾರ ಸಂಜೆ ನಗರದ ಪ್ರವಾಸಿ ಮಂದಿರದಲ್ಲಿ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ವಿಚಾರಗಳು ಮುನ್ನೆಲೆಗೆ ಬಂದಿವೆ. ಆದರೆ ರೇವಣ್ಣ ಅವರು ಹೇಮಲತಾ ಕಮಲ್ ಕುಮಾರ್ ಅವರನ್ನೇ ಆದ್ಯತೆಯಾಗಿ ಪರಿಗಣಿಸಿದ್ದಾರೆ ಎಂದು ತಿಳಿದುಬಂದಿದೆ.

## ಅವೈಜ್ಞಾನಿಕ ನಿರ್ಧಾರದಿಂದ ಅಭಿವೃದ್ಧಿ ಕುಂಠಿತ




ಹಾಸನ: ಪ್ರಧಾನಿ ನರೇಂದ್ರ ಮೋದಿ ಅವರ ಅವೈಜ್ಞಾನಿಕ ನಿರ್ಧಾರಗಳಿಂದ ದೇಶ ಅಭಿವೃದ್ಧಿಯಿಂದ ದೂರ ಸರಿಯುತ್ತಿದೆ ಎಂದು ಕೆ.ಪಿ.ಸಿ.ಸಿ ವಕ್ತಾರ ಕಶ್ಯಪ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ನಿರಂತರ ಬೆಲೆ ಏರಿಕೆ ಮೂಲಕ ಬಡವರ ರಕ್ತ ಹೀರುತ್ತಿದ್ದಾರೆ. ಯುಪಿಎ ಹಾಗೂ ಎನ್‌ಡಿಎ ಸರ್ಕಾರದಲ್ಲಿ ಆಗಿರುವ ಬೆಲೆ ಏರಿಕೆಯನ್ನು ಗಮನಿಸಿದರೆ ದೇಶಕ್ಕೆ ಯಾವ ಸರ್ಕಾರ ಬೇಕು ಎನ್ನುವುದು ಗೊತ್ತಾಗುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರ 148 ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿದೆ. ಯುಪಿಎ ಅವಧಿಯಲ್ಲಿ 450 ರೂ.ಗೆ ಸಿಗುತ್ತಿದ್ದ ಎಲ್‌ಪಿಜಿ ಸಿಲಿಂಡರ್ ಈಗ 900 ರೂ.ಗೆ ಏರಿಕೆಯಾಗಿದೆ. 85 ರೂ. ಇದ್ದ ಪ್ರತಿ ಲೀಟರ್ ಬೆಲೆ ಇವತ್ತು 102 ರೂ. ತಲುಪಿದೆ. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರಿಗೆ ಸತ್ಯ ಗೊತ್ತಿದ್ದರೂ ಪ್ರಧಾನಿ ಮೋದಿ ಅವರನ್ನು ಪ್ರಶ್ನಿಸಲಾಗದೆ ಪ್ರಚಾರಕ್ಕಾಗಿ ರಾಜ್ಯಾದ್ಯಂತ ಜನಾಕ್ರೋಶ ಹೆಸರಿನಲ್ಲಿ ಪ್ರವಾಸ ಮಾಡುತ್ತಿದ್ದಾರೆ ಎಂದು ಛೇಡಿಸಿದರು.

ರಾಜಕೀಯ ಅಸ್ತಿತ್ವಕ್ಕಾಗಿ ಜನಾಕ್ರೋಶ ಯಾತ್ರೆ ನಡೆಸುತ್ತಿರುವ ಬಿಜೆಪಿ ಮುಖಂಡರು ರಾಜ್ಯದ ಜನರ ಬಗ್ಗೆ ನೈಜ ಕಾಳಜಿ ಇದ್ದರೆ ಬೆಲೆ ಏರಿಕೆ ವಿರೋಧಿಸಿ ಪ್ರಧಾನಿ ನರೇಂದ್ರ ಮೋದಿ ನಿವಾಸದ ಎದುರು ಪ್ರತಿಭಟನೆ ನಡೆಸಲಿ ಎಂದು ಸವಾಲು ಹಾಕಿದರು.

ಅತಿಹೆಚ್ಚು ತೆರಿಗೆ ಪಾವತಿಸುತ್ತಿರುವ ರಾಜ್ಯಗಳಲ್ಲಿ ಕರ್ನಾಟಕಕ್ಕೆ ಎರಡನೇ ಸ್ಥಾನವಿದೆ. ಆದರೆ ತೆರಿಗೆ ಪಾಲು ನೀಡುವಲ್ಲಿ ಪ್ರಧಾನಿ ನರೇಂದ್ರ ಮೋದಿ ತಾರತಮ್ಯ ಎಸಗುತ್ತಿದ್ದಾರೆ. ನಮಗೆ ಬರಬೇಕಿದ್ದ ಪರಿಹಾರಕ್ಕಾಗಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಬೇಕಾಯಿತು. ಕಾಂಗ್ರೆಸ್ ಆಡಳಿತವಿರುವ ಎಲ್ಲಾ ರಾಜ್ಯಗಳನ್ನು ಪ್ರಧಾನಿ ಮೋದಿ ನಿರ್ಲಕ್ಷಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ಜಿಲ್ಲಾ ವಕ್ತಾರ ದೇವರಾಜೇಗೌಡ, ಪದಾಧಿಕಾರಿಗಳಾದ ಮಂಜುನಾಥ ಶರ್ಮಾ, ಶಿವಕುಮಾರ್, ಮಲ್ಲಿಗೆವಾಳು ದ್ಯಾವಪ್ಪ, ರಘು ದಾಸರಕೊಪ್ಪಲು ಸುದ್ದಿಗೋಷ್ಠಿಯಲ್ಲಿ ಇದ್ದರು.

## ಹಾಸನಾಂಬ ಕಲಾಕ್ಷೇತ್ರದಲ್ಲಿ ವಿಶ್ವ ಕಲಾ ದಿನಾಚರಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಮಂಗಳವಾರ ಹೊಯ್ಸಳ ಚಿತ್ರಕಲಾ ಪರಿಷತ್, ಸಂಸ್ಕಾರ ಭಾರತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದಿಂದ ವಿಶ್ವ ಕಲಾ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅಂತರಾಷ್ಟ್ರೀಯ ಚಿತ್ರಕಲಾವಿದ ಕೆ.ಟಿ. ಶಿವಪ್ರಸಾದ್ ಮಾತನಾಡಿ, ಸುತ್ತಲಿನ ವಾತಾವರಣವೇ ಕಲಾವಿದನಿಗೆ ಪ್ರೇರಣೆ ಹೊರತು ಬೇರೆ ಏನೂ ಕಾರಣವಲ್ಲ ಎಂದು ಪ್ರಕೃತಿ ಮಧ್ಯೆ ಇದ್ದರೆ ಕಲಾವಿದನಿಗೆ ಹೊಸ ಚಿಂತನೆಗಳು ಮೂಡುತ್ತವೆ. ಅದು ಚಿತ್ರಕಲೆಯ ಮೂಲಕ ಅಭಿವ್ಯಕ್ತಗೊಳ್ಳುತ್ತದೆ. ಕಲಾವಿದನಿಗೆ ಗಿಡ, ಮರಗಳು ಪ್ರೇರಣೆ ನೀಡುತ್ತವೆ. ಹಾಸನಾಂಬ ಕಲಾಕ್ಷೇತ್ರ ನೋಡಿದೆ ಸುತ್ತ ಮರಗಳು ಕಾಣುತ್ತಿದೆ. ಇದೆಲ್ಲಾ ನೋಡಿದರೇ ಮನಸ್ಸಿಗೆ ಆನಂದವಾಗುತ್ತದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಬಿ.ಆರ್. ಬೊಮ್ಮೇಗೌಡ ಮಾತನಾಡಿ, ಮಕ್ಕಳಿಗೆ ಕಲೆ ಬಗ್ಗೆ ತಿಳಿಸಿಕೊಡುವ ನಿಟ್ಟಿನಲ್ಲಿ ಚಿತ್ರಕಲೆ ಶಿಬಿರ ಆಯೋಜನೆ ಮಾಡಲಾಗಿದೆ. ಪೂರ್ಣಚಂದ್ರ ತೇಜಸ್ವಿ ಅವರು ಪರಿಸರವನ್ನು ಹೆಚ್ಚು



ಇಷ್ಟಪಡುತ್ತಿದ್ದರು. ಅಂತಹ ಪುಣ್ಯ ಪುರುಷರ ಜೊತೆ ಶಿವಪ್ರಸಾದ್ ಅವರು ಒಡನಾಟ ಇಟ್ಟುಕೊಂಡಿದ್ದರು. ಯಾವುದೇ ಮಹತ್ವದ ದಿನ ಇದ್ದರೆ ಅದನ್ನ ಕಿರಿಯರಿಗೆ ಹೇಳಿಕೊಡಬೇಕು. ಹಿಂದಿನವರು ಮಾಡುತ್ತಿದ್ದ ಹಲವಾರು ಆಚರಣೆಗಳು ಕಣ್ಮರೆ ಆಗುತ್ತಿದೆ. ಈಗ ಮೊಬೈಲ್ ಯುಗ ಆಗಿರುವುದರಿಂದ ಮೊಬೈಲ್‌ಗೆ ಮೊರೆ ಹೋಗುತ್ತಿದ್ದೇವೆ. ಮುಂದಿನ ದಿನಗಳನ್ನು ನೆನಪಿಸಿಕೊಂಡರೆ ಭಯವಾಗುತ್ತದೆ. ನಾವು ಬೆಳೆದ ರೀತಿಯಲ್ಲಿ ಮಕ್ಕಳು ಬೆಳೆಯುತ್ತಿಲ್ಲ. ನಮ್ಮ ತಂದೆ ತಾಯಿ ರೀತಿಯಲ್ಲಿ ನಾವು ಬೆಳೆದಿಲ್ಲ. ದಿನದಿಂದ ದಿನಕ್ಕೆ ಹೊಸ ಹೊಸ ತಂತ್ರ ಜ್ಞಾನ ಮುಂದುವರೆಯುತ್ತಿದೆ.

ಇದರಿಂದ ಮಾನವಿಯ ಮೌಲ್ಯಗಳು ಮರೆಯಾಗುತ್ತದೆಯೂ ಎಂಬುದು ಒಂದು ಆತಂಕದ ಸನ್ನಿವೇಶವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಪೋಷಕರು ತಮ್ಮ ಮಕ್ಕಳಿಗೆ ಹೆಚ್ಚು ಮೊಬೈಲ್ ಗೆ ಮಾರು ಹೋಗದಂತೆ ಇಂತಹ ಚಿತ್ರಕಲೆ ಸೇರಿದಂತೆ ಎಲ್ಲಾ ಕಲೆ ಬಗ್ಗೆ ಮೈಗೂಡಿಸುವಂತಹ ಕೆಲಸವನ್ನು ಬಾಲ್ಯದಿಂದಲೇ ಮಾಡಬೇಕು ಎಂದು ಕಿವಿಮಾತು ಹೇಳಿದರು. ಪ್ರಾರಂಭದಲ್ಲಿ ಇಂತಹ ಕಲೆಗೆ ಪೋಷಕರು ತಮ್ಮ ಮಕ್ಕಳನ್ನು ಬಿಡುತ್ತಾರೆ. ನಂತರದಲ್ಲಿ ಮಕ್ಕಳನ್ನು ಅಂಕಗಳಿಸುವ ರೇಸಿಗೆ ಕಳುಹಿಸುತ್ತಿದ್ದು, ದಯಮಾಡಿ ಅಂತಹ ಕೆಲಸ ಮಾಡಬೇಡಿ ಎಂದು ಸಲಹೆ ನೀಡಿದರು. ಮಕ್ಕಳಿಗೆ ಯಾವುದರಲ್ಲಿ ಆಸಕ್ತಿ ಇದೆ ಅದರಲ್ಲಿಯೇ ಹೆಚ್ಚೆಚ್ಚು ತೊಡಗಿಸಿಕೊಳ್ಳಲು ಅವಕಾಶ ನೀಡಿ ಎಂದು ಕರೆ ನೀಡಿದರು.

ಚನ್ನರಾಯಪಟ್ಟಣದ ಚಿತ್ರ ಕಲಾವಿದ ಹೆಚ್.ಎಸ್. ಮಂಜುನಾಥ್ ಸ್ಥಳದಲ್ಲಿಯೇ ಚಿತ್ರ ಬರೆಯುವುದರ ಮೂಲಕ ಪ್ರಾತ್ಯಕ್ಷಿಕೆ ಪ್ರದರ್ಶಿಸಿದರು.

ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷ ವೈ.ಬಿ. ರವಿ, ಜಿಲ್ಲಾ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಸಿ. ಬಸವರಾಜು, ಗಮಕ ಕಲಾ ಪರಿಷತ್ ಜಿಲ್ಲಾಧ್ಯಕ್ಷ ಗಣೇಶ್ ಉಡುಪ, ನಿರ್ಮಲ ಕಲಾ ಶಾಲೆಯ ಪ್ರಾಚಾರ್ಯ ಎನ್. ನಾಗೇಶ್, ಚಿತ್ರಕಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಹೆಚ್.ಎಂ. ರಮೇಶ್ ಇದ್ದರು.

ಹೊಯ್ಸಳ ಚಿತ್ರಕಲಾ ಪರಿಷತ್ತು ಪ್ರಧಾನ ಸಂಚಾಲಕ ಕೆ.ಎನ್. ಶಂಕರಪ್ಪ ಸ್ವಾಗತಿಸಿದರು. ಚಿತ್ರಕಲಾ ಶಿಕ್ಷಕ ಜಿ.ಎಸ್. ಶಿವಶಂಕರಪ್ಪ ನಿರೂಪಿಸಿದರು.

## ಮನುಷ್ಯನ ಬುದ್ಧಿ ಸತ್ಕಾರ್ಯಗಳಿಗೆ ವಿನಿಯೋಗವಾಗಲಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು : ಮನುಷ್ಯ ತನ್ನ ಬುದ್ಧಿಶಕ್ತಿಯನ್ನು ಸತ್ಕಾರ್ಯಗಳಿಗೆ ವಿನಿಯೋಗ ಮಾಡಿಕೊಳ್ಳಬೇಕು ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಪಟ್ಟಣದ ದೊಡ್ಡಮಠದ ಆವರಣದಲ್ಲಿ ಚನ್ನಬಸವೇಶ್ವರರ ಕತೃ ಗದ್ದುಗೆಯ ನೂತನ ಕಟ್ಟಡ ಲೋಕಾರ್ಪಣೆ ಪ್ರಯುಕ್ತ ಏರ್ಪಡಿಸಿದ್ದ ಧಾರ್ಮಿಕ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಪ್ರಾಣಿ ಪಕ್ಷಿಗಳಿಗೆ ಸಾಮಾನ್ಯ ಜ್ಞಾನ ನೀಡಿರುವ ಭಗವಂತ ಮನುಷ್ಯನಿಗೆ ಮಾತ್ರ ಉನ್ನತ ಜ್ಞಾನಾರ್ಜನೆ ಕರುಣಿಸಿದ್ದಾನೆ. ಮನುಷ್ಯ ಉನ್ನತ ಆಲೋಚನೆ ಬೆಳೆಸಿಕೊಳ್ಳಬೇಕು. ಸತ್ಕಾರ್ಯಗಳು ಸದಾಕಾಲ ಶಾಶ್ವತವಾಗಿರುತ್ತವೆ. ದುಶ್ಚಟ ದುರಭ್ಯಾಸಗಳಿಂದ ದೂರವುಳಿದು ಬದುಕಿನಲ್ಲಿ ಶಾಂತಿ ನೆಮ್ಮದಿ ಕಂಡುಕೊಳ್ಳಬೇಕು ಎಂದರು.



ಶಿವಗಂಗೆ ಮೇಲಣಗವಿ ವೀರಸಿಂಹಾಸನ ಸಂಸ್ಥಾನ ಮಠದ ಶ್ರೀ ಮಲಯಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ದೇಶದ ಮೇಲೆ ಅನೇಕ ಸಲ ಅನ್ಯಾಯ ಅಕ್ರಮಣಗಳು ನಡೆದು ಅರಮನೆಗಳನ್ನೂ ಸಹ ಲೂಟಿ ಮಾಡಲಾಗಿದೆ. ಆದರೂ ದೇಶ ಉಸಿರಾಡುತ್ತಿದೆ ಎಂದರೆ ಇಲ್ಲಿನ ಪೂರ್ವರ ತಪೋಶಕ್ತಿ ಕಾರಣ. ಪೂರ್ವಿಕರ ತಪೋಫಲದಿಂದ ಇಂತಹ ಮಠಗಳು ಬೆಳೆದಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಎ. ಮಂಜು ಮಾತನಾಡಿ, ಸಮಾಜದ ಉನ್ನತಿಗೆ ಮಠಗಳ ಸೇವೆ ಅನನ್ಯ, ಸರ್ಕಾರಿ ಶಾಲೆಗಳಂತೆಯೇ ಮಠಗಳೂ ಕೂಡ ಶಿಕ್ಷಣ ನೀಡಿ ಜ್ಞಾನಾರ್ಜನೆ ಬಿತ್ತುತ್ತಿವೆ. ದೊಡ್ಡಮಠದ ಶ್ರೀಗಳು ಭಕ್ತರ ಸಹಕಾರದಿಂದ ದೂರದೃಷ್ಟಿ ಇಟ್ಟುಕೊಂಡು ಅಭಿವೃದ್ಧಿಗೆ ಶ್ರಮಿಸಿರುವುದು ಶ್ಲಾಘನೀಯ ಎಂದರು.

ಬೆಂಗಳೂರು ಸರ್ಪಭೂಷಣ ಮಠದ ಧರ್ಮದರ್ಶಿ ಪರಮಶಿವಯ್ಯ, ಸಿದ್ದೇಶ್ ನಾಗೇಂದ್ರ, ಗುರುಮೂರ್ತಿ ಮಾತನಾಡಿದರು. ಕಾರ್ಯಕ್ರಮದ ಉದ್ಘಾಟನೆಗೆ ಬರಬೇಕಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅನುಪಸ್ಥಿತಿಯಲ್ಲಿ ಅವರು ಕಳುಹಿಸಿದ್ದ ಶುಭ ಸಂದೇಶವನ್ನು ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಓದಿದರು. ನಾಗಣಸೂರು ರೇವೂರು ಬ್ರಹ್ಮಲಿಂಗೇಶ್ವರ ಮಠದ ಶ್ರೀಕಂಠ ಶಿವಾಚಾರ್ಯ ಸ್ವಾಮೀಜಿ, ಸೂಗೂರೇಶ್ವರ ಶಿವಾಚಾರ್ಯ ಸ್ವಾಮೀಜಿ, ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ, ತಹಸೀಲ್ದಾರ್ ಸೌಮ್ಯ, ತಾಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ, ವೀರಶೈವ ಮಹಾಸಭಾ ರಾಷ್ಟ್ರೀಯ ಘಟಕದ ಚಂದ್ರಕಲಾ, ರೋಹಿತ್, ಗಂಗೇಗೌಡ, ನಂದೀಶ್, ರವಿಕುಮಾರ್, ಯೋಗೇಶ್, ತಾಲ್ಲೂಕು ರೈತ ಸಂಘದ ಅಧ್ಯಕ್ಷ ಯೋಗಣ್ಣ ಇದ್ದರು.

## ಮೌಲ್ಯಮಾಪನ ಕೇಂದ್ರ ಸುತ್ತ ನಿಷೇಧಾಜ್ಞೆ

ಹಾಸನ: ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ಮೌಲ್ಯ ಮಾಪನ ಕಾರ್ಯವು ಏ. 20ರ ವರೆಗೆ ಜರುಗಲಿದ್ದು, ಸದರಿ ಮೌಲ್ಯಮಾಪನ ಸುವ್ಯವಸ್ಥಿತವಾಗಿ ನಡೆಸಲು, ಮೌಲ್ಯ ಮಾಪನ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಆದೇಶಿಸಿದ್ದಾರೆ.

ಮೌಲ್ಯ ಮಾಪನ ಕಾರ್ಯ ನಡೆಯಲಿರುವ ಪರೀಕ್ಷಾ ಕೇಂದ್ರಗಳಾದ ರಾಯಲ್ ಅಪೊಲೊ ಇಂಟರ್ ನ್ಯಾಷನಲ್ ಶಾಲೆ, ವಿಜಯ ಪ್ರೌಢ ಶಾಲೆ, ಕ್ರೈಸ್ಟ್ ಆಂಗ್ಲ ಮಾಧ್ಯಮ ಶಾಲೆ, ಸಿ.ಕೆ.ಎಸ್. ಬಾಲಕಿಯರ ಪ್ರೌಢ ಶಾಲೆ, ಸಂತ ಫಿಲೋಮಿನಾ, ಪ್ರೌಢ ಶಾಲೆ, ಸಂತ ಜೋಸೆಫರ ಪ್ರೌಢ ಶಾಲೆಯಲ್ಲಿ ಮೌಲ್ಯ ಮಾಪನ ಕಾರ್ಯ ನಡೆಯಲಿದೆ. ಮೌಲ್ಯಮಾಪನ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ.

ಯಾವುದೇ ಸಾರ್ವಜನಿಕರು, 5 ಜನ ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ನಿಷೇಧಿತ ಪ್ರದೇಶವೆಂದು ಜಾರಿಗೊಳಿಸಿದ ಮೌಲ್ಯ ಮಾಪನ ಕೇಂದ್ರಗಳ ವ್ಯಾಪ್ತಿಯಲ್ಲಿ ಗುಂಪು ಸೇರುವುದನ್ನು ಅಥವಾ ತಿರುಗುವುದನ್ನು ನಿಷೇಧಿಸಿದೆ. ಅನುಮಾನಾಸ್ಪದ ವ್ಯಕ್ತಿಗಳಿಗೆ ಮೌಲ್ಯ ಮಾಪನ ಕೇಂದ್ರಕ್ಕೆ ಪ್ರವೇಶವನ್ನು ನಿಷೇಧಿಸಿದೆ. ಮೌಲ್ಯಮಾಪನ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಹೊರಗಿನ ವ್ಯಕ್ತಿಗಳು ಯಾವುದೇ ರೀತಿಯ ಬೆದರಿಕೆ ಒಡ್ಡುವುದನ್ನು ನಿಷೇಧಿಸಿದೆ. ನಿಷೇಧಿತ ಮೌಲ್ಯ ಮಾಪನ ಕೇಂದ್ರಗಳ ಸುತ್ತ ಮೊಬೈಲ್ ಬಳಕೆ ನಿಷೇಧಿಸಿದೆ. ಮೌಲ್ಯಮಾಪನ ಗೌಪ್ಯ ಸಾಮಾಗ್ರಿಗಳನ್ನು ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರದಿಂದ ಹೊರಗಡೆ ತೆಗೆದುಕೊಂಡು ಹೋಗುವುದನ್ನು ನಿಷೇಧಿಸಿದೆ.

## ನ್ಯಾಯಾಧೀಶರ ಮನೆಯಲ್ಲಿ ಕಳವಿಗೆ ಯತ್ನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಎಸ್‌ಬಿಎಂ ಕಾಲನಿಯಲ್ಲಿರುವ ಮನೆಯಲ್ಲಿ ಕಳವಿಗೆ ಯತ್ನಿಸಿರುವ ಕಳ್ಳರು ಬರಿಗೈಯಲ್ಲಿ ವಾಪಸ್ ಹೋಗಿರುವುದು ಮಾತ್ರವಲ್ಲದೆ ಏರ್ ಗನ್ ಹಾಗೂ ಕಬ್ಬಿಣದ ರಾಡ್ ಅನ್ನು ಅಲ್ಲೇ ಬಿಟ್ಟಿದ್ದಾರೆ.



ನ್ಯಾಯಾಧೀಶ ಜೈಶಂಕರ್ ಅವರ ಮಾಲೀಕತ್ವದ ಮನೆಯಲ್ಲಿ ಸೋಮವಾರ ರಾತ್ರಿ ಕಳ್ಳತನದ ಯತ್ನ ನಡೆದಿದೆ. ಜೈಶಂಕರ್ ಅವರು ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ನ್ಯಾಯಾಧೀಶರಾಗಿದ್ದಾರೆ. ಎಸ್‌ಬಿಎಂ ಕಾಲನಿಯಲ್ಲಿರುವ ತಮ್ಮ ಮನೆಯನ್ನು ಭರತ್ ಎಂಬುವರಿಗೆ ಬಾಡಿಗೆ ಕೊಟ್ಟಿದ್ದಾರೆ. ಸೋಮವಾರ ರಾತ್ರಿ ಹಿಂಬಾಗಿಲ ಬೀಗ ಮುರಿದು ಒಳನುಗ್ಗಿರುವ ಕಳ್ಳರು ಚಿನ್ನಾಭರಣ ಹಾಗೂ ಹಣಕ್ಕಾಗಿ ಶೋಧ ನಡೆಸುತ್ತಿದ್ದರು. ಈ ವೇಳೆ ಯಾವುದೋ ಸಾಮಗ್ರಿ ಕೆಳಗೆ ಬಿದ್ದಿದ್ದರಿಂದ ಜೋರು ಶಬ್ದವಾಗಿದ್ದು, ಪಕ್ಕದ ಕೋಣೆಯಲ್ಲಿ ಮಲಗಿದ್ದ ಭರತ್ ಲೈಟ್ ಹಾಕಿದಾಗ ಕಳ್ಳರು ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಬರಿಗೈಯಲ್ಲಿ ವಾಪಾಸ್ಸಾಗಿದ್ದಾರೆ. ಮನೆ ಮಾಲೀಕರ ಕೈಗೆ ಸಿಗುತ್ತೇವೆಂಬ ಆತುರದಲ್ಲಿ ಓಡಿಹೋಗುವಾಗ ಜೊತೆಗೆ ತಂದಿದ್ದ ಏರ್ ಗನ್ ಹಾಗು ಕಬ್ಬಿಣದ ರಾಡ್ ಅನ್ನು ಅಲ್ಲೇ ಬಿಟ್ಟು ಹೋಗಿದ್ದಾರೆ.

ವಿಷಯ ತಿಳಿದು ಮಂಗಳವಾರ ಬೆಳಿಗ್ಗೆ ಸ್ಥಳಕ್ಕೆ ಬಡಾವಣೆ ಠಾಣೆ ಪೊಲೀಸರು, ಬೆರಳಚ್ಚು ತಜ್ಞರು ಹಾಗೂ ಶ್ವಾನ ದಳದೊಂದಿಗೆ ಪರಿಶೀಲನೆ ನಡೆಸಿದರು.

## ಬ್ರಹ್ಮೇಶ್ವರಸ್ವಾಮಿ ದೇಗುಲದಲ್ಲಿ ಕಳಸಾರೋಹಣ



ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಗ್ರಾಮದಲ್ಲಿ ಶ್ರೀ ಬ್ರಹ್ಮೇಶ್ವರಸ್ವಾಮಿ ದೇವಾಲಯ ಲೋಕಾರ್ಪಣೆ ಮತ್ತು ಕಳಶ ಪ್ರತಿಷ್ಠಾಪನಾ ಮಹೋತ್ಸವ ಮಂಗಳವಾರ ನೆರವೇರಿತು. ಬೆಳಿಗ್ಗೆ ಸುಪ್ರಭಾತ, ಅಷ್ಟಬಂಧ ಪ್ರತಿಷ್ಠೆ, ನೇತ್ರೋನ್ಮಿಲನ, ಪ್ರಾಣಪ್ರತಿಷ್ಠೆ, ಪೂಜಾಂಗ ಪ್ರತಿಷ್ಠಾಂಗ, ರಾಕ್ಷೋಘ್ನ, ವಾಸ್ತುಹೋಮ, ಶಿವಪಂಚಾಕ್ಷರಿ ಹೋಮಗಳ ಪೂರ್ಣಾಹುತಿ ಮಧ್ಯಾಹ್ನ 12 ಗಂಟೆಗೆ ಘನಪಾಟಿ ಕೃಷ್ಣಮೂರ್ತಿ ಅವರ ನೇತೃತ್ವದಲ್ಲಿ ಜರುಗಿತು.

## ಹಿರೀಸಾವೆ: ರೈಲು ನಿಲುಗಡೆಗೆ ಯತ್ನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಪ್ರಯಾಣಿಕರ ಅನುಕೂಲಕ್ಕಾಗಿ ಹಿರೀಸಾವೆಯಲ್ಲಿ ರೈಲು ನಿಲುಗಡೆ ಮಾಡುವಂತೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಲಾಗುವುದು ಎಂದು ಸಂಸದ ಶ್ರೇಯಸ್ ಪಟೇಲ್ ಅವರು ಭರವಸೆ ನೀಡಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದಲ್ಲಿ ನಡೆದ ಶ್ರೀ ಚೌಡೇಶ್ವರಿ ಹಬ್ಬ ಹಾಗೂ ಶ್ರೀ ಬ್ರಹ್ಮೇಶ್ವರ ಸ್ವಾಮಿ ದೇವಸ್ಥಾನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ರೈಲು ನಿಲುಗಡೆ ಮತ್ತು ಇತರೆ ಸೌಲಭ್ಯಗಳ ಬಗ್ಗೆ ಸಾರ್ವಜನಿಕರು ಮನವಿ ಮಾಡಿದ್ದಾರೆ. ಈ ಬಗ್ಗೆ ರೈಲ್ವೆ ಸಚಿವರು, ಇಲಾಖೆಯ ಡಿಆರ್‌ಎಂ ಸೇರಿ ಹಿರಿಯ ಅಧಿಕಾರಿಗಳ ಸಭೆ ನಡೆಸಿ ಶ್ರವಣಬೆಳಗೊಳ ರಸ್ತೆ ರೈಲ್ವೆ ಮೇಲ್ಸೇತುವೆ ಬೀದಿ ದೀಪ ಅಳವಡಿಕೆ ಹಾಗೂ ಮೂಲಸೌಲಭ್ಯ ಕಲ್ಪಿಸಲು ಕ್ರಮ ವಹಿಸಲಾಗುವುದು ಎಂದರು.



ದೊಡ್ಡ ಕೆರೆಯ ಏರಿಯು 2 ವರ್ಷದ ಹಿಂದೆ ಕುಸಿದಿದೆ. ದುರಸ್ತಿ ಕಾರ್ಯ ಇನ್ನೂ ಆಗಿಲ್ಲ ಎಂದು ರೈತರು ಸಂಸದರ ಗಮನಕ್ಕೆ ತಂದರು. ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಸಂಸದ ಶ್ರೇಯಸ್ ಪಟೇಲ್ ಆದ್ಯತೆ ಮೇರೆಗೆ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

ಮುಂದಿನ ದಿನಗಳಲ್ಲಿ ಹೋಬಳಿ ಅಥವಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಾರ್ವಜನಿಕರು ಮತ್ತು ಅಧಿಕಾರಿಗಳು ಸಭೆ ನಡೆಸಿ ನನ್ನ ಇತಿಮಿತಿಯೊಳಗೆ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು.

ಮುದ್ರೇಕಲ್ಲು ಆಂಜನೇಯ ಸ್ವಾಮಿ ಪ್ರತಿಮೆ ನಿರ್ಮಾಣಕ್ಕೆ ಸಹಕಾರ ನೀಡುವಂತೆ ಸಮಿತಿಯ ದೇವರಾಜು, ನಾಗರಾಜು ಮಂಜುನಾಥ್ ಎಂಪಿಯವರಿಗೆ ಮನವಿ ಸಲ್ಲಿಸಿದರು.

# ದಲಿತರ ಮನೆಯಲ್ಲಿ ಶಾಸಕ ಎ. ಮಂಜು ವಾಸ್ತವ್ಯ

## ಅಂಬೇಡ್ಕರ್ ಜಯಂತಿ ಹಿನ್ನೆಲೆ ಅಧಿಕಾರಿಗಳೊಂದಿಗೆ ಸಭೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಶಾಸಕ ಎ. ಮಂಜು ಅವರು ತಾಲ್ಲೂಕು ಆಡಳಿತದ ಅಧಿಕಾರಿಗಳೊಂದಿಗೆ ಏ. 13ರಂದು ತಾಲ್ಲೂಕಿನ ದೊಡ್ಡಬೆಮ್ಮತ್ತಿ ಗ್ರಾಮದ ದಲಿತರ ಮನೆಯಲ್ಲಿ ವಾಸ್ತವ್ಯ ಮಾಡುವ ಮೂಲಕ ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನ ಆಚರಿಸಿದರು.

ಗ್ರಾಮದ ಸ್ವಾಮಿ ಅವರ ಮನೆಯಲ್ಲಿ ಶಾಸಕರು ದಿನಕಳೆದರು. ಕಳೆದ ನಾಲ್ಕು ವರ್ಷಗಳಿಂದಲೂ ಅಂಬೇಡ್ಕರ್ ಜಯಂತಿ ಮೊದಲ ದಿನ ದಲಿತ ಸಮುದಾಯದವರ ಮನೆಯಲ್ಲಿ ವಾಸ್ತವ್ಯ ಹೂಡಿ ಸಾಮಾಜಿಕ ಅರಿವು ಮೂಡಿಸುವ ಕೆಲಸವನ್ನು ಎ. ಮಂಜು ಮಾಡುತ್ತಿದ್ದಾರೆ.

ಈ ತನಕ ತಾಲ್ಲೂಕಿನ ಅಜ್ಜೂರು, ವಿಜಾಪುರ ಅರಣ್ಯ, ಅತ್ನಿ ಹಾಗೂ ದೊಡ್ಡಬೆಮ್ಮತ್ತಿ ಗ್ರಾಮಗಳಲ್ಲಿನ ದಲಿತರ ಮನೆಯಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿದ್ದಾರೆ. ಈ ಬಾರಿ ಇಡೀ ತಾಲ್ಲೂಕು ಆಡಳಿತದೊಂದಿಗೆ ಮಂಜು ಅವರು ದಲಿತ ಸಮುದಾಯದ ವ್ಯಕ್ತಿಯ ಮನೆ ಆವರಣದಲ್ಲಿ ಸಭೆ ಕೂಡ ನಡೆಸಿದ್ದು ವಿಶೇಷವಾಗಿತ್ತು.

ತಹಶೀಲ್ದಾರ್ ಸೌಮ್ಯ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್, ಪಶು ಇಲಾಖೆ ಅಧಿಕಾರಿ ಡಾ. ಶಿವರಾಂ, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ, ಕೃಷಿ ಅಧಿಕಾರಿ ಕವಿತಾ, ಕಂದಾಯ ಅಧಿಕಾರಿ ಸೋಮಶೇಖರ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಲೋಹಿತ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರವಿಕುಮಾರ್, ಬಿಆರ್‌ಸಿ ಬಾಲರಾಜ್, ಪಿಎಸ್‌ಐ ಕಾವ್ಯ, ತೋಟಗಾರಿಕೆ ಅಧಿಕಾರಿ ರಾಜೇಶ್, ಸಿಡಿಪಿಒ ವೆಂಕಟೇಶ್, ಎಂಜಿನಿಯರ್ ನವೀನ್ ಸೇರಿ ಇತರ ಇಲಾಖೆ ಅಧಿಕಾರಿಗಳು ಹಾಜರಿದ್ದರು.



### ರಾಜಕೀಯ ಗಿಮಿಕ್ ಅಲ್ಲ

ಇದು ಕೇವಲ ರಾಜಕೀಯ ಪ್ರೇರಿತವಲ್ಲ, ಬದಲಾಗಿ ಇಡೀ ಆಡಳಿತದೊಂದಿಗೆ ಇಲ್ಲಿ ಬಂದು ಇಲಾಖೆಗಳಿಂದ ದೊರೆಯುವ ಸವಲತ್ತು, ಕಾರ್ಯಕ್ರಮ ಕುರಿತು ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಕಾಲಮಿತಿಯೊಳಗೆ ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡುತ್ತಿದ್ದೇನೆ. ಅದಕ್ಕೆ ಇಲಾಖೆ ಅಧಿಕಾರಿಗಳು ಕೂಡ ರಾತ್ರಿ ಎನ್ನದೇ ಹಾಜರಾಗಿ ಕರ್ತವ್ಯನಿಷ್ಠೆ ತೋರಿಸಿದ್ದಾರೆ. ನನ್ನ ಈ ಕಾರ್ಯವನ್ನು ರಾಜಕೀಯ ಗಿಮಿಕ್ ಎಂದು ಭಾವಿಸುವುದು ಬೇಡ ಎಂದರು.

### ನೀರಾವರಿ ಯೋಜನೆಗೆ 77 ಕೋಟಿ ರೂ.

ದೊಡ್ಡಬೆಮ್ಮತ್ತಿ ಮತ್ತು ಸುತ್ತಮುತ್ತಲ ಗ್ರಾಮಗಳ ಕೆರೆ, ಕಟ್ಟೆಗಳಿಗೆ ಕಟ್ಟೆಪುರ ಎರಡನೇ ಹಂತದ ನೀರಾವರಿ ಯೋಜನೆಯಲ್ಲಿ ನೀರು ಹರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಎ. ಮಂಜು ತಿಳಿಸಿದರು.

ಗ್ರಾಮ ವಾಸ್ತವ್ಯದ ಪ್ರಯುಕ್ತ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡಿ, ತಾವು ಸಚಿವರಾಗಿದ್ದ ವೇಳೆ ಕೊಣನೂರು ಮತ್ತು ಕಣಿಯಾರು ಏತ ನೀರಾವರಿ ಯೋಜನೆಗಳಿಗೆ ಮುಂಗಡ ಪತ್ರದಲ್ಲಿ ಒಪ್ಪಿಗೆ ಪಡೆಯಲಾಗಿತ್ತು. ನಂತರದ ದಿನಗಳಲ್ಲಿ ಅದನ್ನು ಕೈಬಿಡಲಾಗಿತ್ತು. ಈಗ ಸರ್ಕಾರ 77 ಕೋಟಿ ರೂ. ಅನುದಾನ ನೀಡಿದ್ದು, 2026ರಲ್ಲಿ ಈ ಭಾಗದ ಕೆರೆಕಟ್ಟೆಗಳಿಗೆ ನೀರು ಹರಿಸಲಾಗುವುದು ಎಂದರು. ಅಲ್ಲಾಪಟ್ಟಣದ ಗ್ರಾಮದ ಬಳಿ 180 ಕೋಟಿ ರೂ. ವೆಚ್ಚದಲ್ಲಿ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರ ತೆರೆಯಲಾಗುತ್ತಿದೆ. ಅಲ್ಲದೆ ಕೇರಾಳಾಪುರ, ಗುಡ್ಡನಕೊಪ್ಪಲು, ಸಿದ್ದಾಪುರ ಗೇಟ್, ಸಂತೆಮರೂರಲ್ಲಿ 66 ಕೆವಿ ವಿದ್ಯುತ್ ವಿತರಣಾ ಕೇಂದ್ರಗಳನ್ನು ತೆರೆಯಲು ಕ್ರಮ ಕೈಗೊಂಡಿದ್ದು ಇವು ಕಾರ್ಯಾರಂಭಗೊಂಡರೆ ತಾಲ್ಲೂಕಿನಲ್ಲಿ ವಿದ್ಯುತ್ ಸಮಸ್ಯೆ ಇರುವುದಿಲ್ಲ ಎಂದರು.

ಸ್ಮಶಾನ, ಸರ್ಕಾರಿ ಶಾಲೆಯಲ್ಲಿ ಶೌಚಾಲಯ ವ್ಯವಸ್ಥೆ ಸೇರಿ ಗ್ರಾಮಸ್ಥರ ಹಲವು ಸಮಸ್ಯೆಗಳ ಕುರಿತು ಪರಿಶೀಲಿಸಿ ತುರ್ತಾಗಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

### ಅಂಬೇಡ್ಕರ್ ಆದರ್ಶ ಪಾಲಿಸೋಣ

ಅಧಿಕಾರಿಗಳ ಸಭೆ ಬಳಿಕ ಮಾತನಾಡಿದ ಶಾಸಕ ಎ. ಮಂಜು, ಶಾಸಕ ಆಗದಿದ್ದಾಗಲೂ ಅಜ್ಜೂರು, ವಿಜಾಪುರ ಅರಣ್ಯ ಹಾಗು ಶಾಸಕನಾದ ಮೇಲೆ ಅತ್ನಿ ಮತ್ತು ದೊಡ್ಡಬೆಮ್ಮತ್ತಿ ಗ್ರಾಮಗಳ ದಲಿತ ಸಮುದಾಯಕ್ಕೆ ಸೇರಿದ ಸ್ನೇಹಿತರ ಮನೆಯಲ್ಲಿ ಒಂದು ರಾತ್ರಿ ವಾಸ್ತವ್ಯ ಹೂಡಿ ಸಾಮಾಜಿಕ ಪರಿವರ್ತನೆಯ ಪ್ರಮುಖ ಅಂಶವನ್ನು ಸ್ವಯಂ ಪ್ರೇರಿತವಾಗಿ ಮೈಗೂಡಿಸಿಕೊಂಡು ಅಂಬೇಡ್ಕರ್ ಅವರ ಆದರ್ಶ ಚಿಂತನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರು.

## ಸ್ವಪಕ್ಷೀಯರ ಅಸಹಕಾರ ಪುರಸಭೆ ಅಧ್ಯಕ್ಷ ಕಣ್ಣೀರು



ಬೇಲೂರು: ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನಾಚರಣೆಯಲ್ಲಿ ಬಾಬಾ ಸಾಹೇಬರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲು ಅವಕಾಶ ನೀಡದ ಹಿನ್ನೆಲೆಯಲ್ಲಿ ಪುರಸಭೆ ಅಧ್ಯಕ್ಷ ಎ.ಆರ್. ಅಶೋಕ್ ಕಣ್ಣೀರು ಹಾಕಿದ ಘಟನೆ ನಡೆದಿದೆ.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಅಂಬೇಡ್ಕರ್ ಜಯಂತಿಯಲ್ಲಿ ಸ್ವ ಪಕ್ಷೀಯ ಸದಸ್ಯರೇ ಗಲಾಟೆ ಮಾಡಿ ಅಧ್ಯಕ್ಷರಿಂದ ಪುಷ್ಪ ನಮನ ಸಲ್ಲಿಕೆಗೆ ತಡೆಯೊಡ್ಡಿದರು. ಅದರಿಂದ ಮನನೊಂದ ಅಶೋಕ್ ಅವರು ಕಣ್ಣೀರು ಹಾಕುತ್ತಲೇ ಹೊರಬಂದರು. ನಂತರ ತಾಲ್ಲೂಕು ಕಚೇರಿ ಆವರಣದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲೂ ಅದೇ ವಿಚಾರ ಪ್ರಸ್ತಾಪಿಸಿ ಕಣ್ಣೀರು ಸುರಿಸಿದರು.

ಪುರಸಭೆ ಅಧ್ಯಕ್ಷನಾದ ದಿನದಿಂದ ಪಟ್ಟಣದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಅಂಬೇಡ್ಕರ್ ಜಯಂತಿ ಬಳಿಕ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಹೇಳಿದ್ದೆ. ಸ್ವಪಕ್ಷಿಯರೇ ನನಗೆ ಅಧಿಕಾರ ಅವಧಿಯಲ್ಲಿ ಮಾನಸಿಕ ಕಿರುಕುಳ ನೀಡಿದ್ದಾರೆ. ಈ ರೀತಿಯ ರಾಜಕೀಯ ಯಾವತ್ತಿಗೂ ಯಾರೂ ಮಾಡಬಾರದು ಎಂದು ಗಳಗಳನೆ ಅತ್ತುಬಿಟ್ಟರು.

ಶಾಸಕ ಹೆಚ್.ಕೆ. ಸುರೇಶ್ ಮಾತನಾಡಿ, ಪುರಸಭೆ ಅಧ್ಯಕ್ಷರು ಒಳ್ಳೆಯ ಕೆಲಸ ಮಾಡುತ್ತಿದ್ದು ಪುರಸಭೆಯ ಸಂಪೂರ್ಣ ಅವಧಿಯವರೆಗೆ ನೀವೇ ಕಾರ್ಯನಿರ್ವಹಿಸಿ ನಮ್ಮ ಸಂಪೂರ್ಣ ಸಹಕಾರ ನಿಮಗಿದೆ ಎಂದು ಅಭಯ ನೀಡಿದರು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಎಂ. ಮಮತ, ಸಿಪಿಐ ರೇವಣ್ಣ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ವಸಂತಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ರಾಜೇಗೌಡ, ತಾ.ಪಂ. ಮಾಜಿ ಸದಸ್ಯರಾದ ಪರ್ವತಯ್ಯ, ಮಂಜುನಾಥ, ಪುರಸಭಾ ಸದಸ್ಯ ಜಮಾಲ್ಲುದ್ದಿನ್, ಸುಜಯಕುಮಾರ್ ಮತ್ತಿತರರಿದ್ದರು.

# ನಮ್ಮಲ್ಲಿ ಕೊನೆಗಾಣದ ಆನೆ-ಮಾನವ ಸಂಘರ್ಷ!

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಪ್ರತಿ ವರ್ಷ ಏಪ್ರಿಲ್ 16ರಂದು ಭಾರತ ಸೇರಿ ಕೆಲವು ರಾಷ್ಟ್ರಗಳಲ್ಲಿ ಆನೆ ರಕ್ಷಣೆ ದಿನ ಆಚರಿಸಲಾಗುತ್ತದೆ. ಇದು ಆನೆಗಳು ಎದುರಿಸುತ್ತಿರುವ ಸವಾಲುಗಳ ಕುರಿತು ಜಾಗೃತಿ ಮೂಡಿಸುವ ಹಾಗೂ ಸಂರಕ್ಷಣಾ ಕ್ರಮಗಳನ್ನು ಉತ್ತೇಜಿಸುವ ದಿನವಾಗಿದೆ. ಭಾರತವು ವಿಶ್ವದ ಏಷಿಯನ್ ಆನೆಗಳ ಶೇಕಡಾ 60ರಷ್ಟು ಜನಸಂಖ್ಯೆಗೆ ಆಶ್ರಯ ನೀಡುತ್ತಿರುವುದರಿಂದ, ಈ ದಿನಕ್ಕೆ ಇಲ್ಲಿ ವಿಶಿಷ್ಟ ಮಹತ್ವವಿದೆ.



ಇಂದು ಆನೆ ರಕ್ಷಣೆ ದಿನ

### ಕರ್ನಾಟಕದಲ್ಲೇ ಅತೀ ಹೆಚ್ಚು ಆನೆಗಳು

ಒಟ್ಟು ಕಾಡಾನೆಗಳ ಸಂಖ್ಯೆ (2017ರ ಗಣತಿ): 29,964

ಅತಿಹೆಚ್ಚು ಆನೆಗಳಿರುವ ರಾಜ್ಯಗಳು:

ಕರ್ನಾಟಕ 6,049

ಅಸ್ಸಾಂ 5,719

ಕೇರಳ 3,054

> ಭಾರತದಲ್ಲಿ ಆನೆ ರಕ್ಷಣೆ ದಿನವು ಕೇವಲ ಪ್ರಕೃತಿ ಸಂರಕ್ಷಣೆಯ ಚಟುವಟಿಕೆ ಅಲ್ಲ ಇದು ಸಂಸ್ಕೃತಿ, ಭಕ್ತಿಯ ಮತ್ತು ಪರಿಸರದ ಸಂಕೇತವಾದ ಆನೆಗಳನ್ನು ಗೌರವಿಸುವ ಒಂದು ರಾಷ್ಟ್ರದ ಬದ್ಧತೆಯ ಪ್ರತೀಕ. ಈ ದಿನವು ಪ್ರತಿಯೊಬ್ಬರಿಗೂ ನಾಗರಿಕರಿಂದ ಹಿಡಿದು ಆಡಳಿತವರೆಗೆ ಆನೆಗಳ ಭವಿಷ್ಯಕ್ಕೆ ಜವಾಬ್ದಾರಿಯುತ ಕಾರ್ಯಕ್ಕೆ ಪ್ರೇರಣೆಯಾಗಿದೆ.

### ಭಾರತದಲ್ಲಿ ಆನೆಗಳು ಎದುರಿಸುತ್ತಿರುವ ಸವಾಲುಗಳು

- ಆವಾಸ ಸ್ಥಾನದ ನಾಶ: ಕುಗ್ಗುತ್ತಿರುವ ಕಾಡು ಹಾಗೂ ಹಿಗ್ಗುತ್ತಿರುವ ನಗರೀಕರಣದಿಂದ ಆನೆಗಳು ತಮ್ಮ ನೈಸರ್ಗಿಕ ವಾಸಸ್ಥಾನಗಳನ್ನು ಕಳೆದುಕೊಳ್ಳುತ್ತಿವೆ.
- ಮಾನವ-ಆನೆ ಸಂಘರ್ಷ: ಹತ್ತು ವರ್ಷಗಳಲ್ಲಿ ಸರಾಸರಿ 500 ಜನರು ಆನೆಗಳೊಂದಿಗೆ ನಡೆದ ಸಂಘರ್ಷದಲ್ಲಿ ಸಾವನ್ನಪ್ಪಿದ್ದಾರೆ.
- ಬೇಟೆ ಮತ್ತು ದಂತದ ಕಳ್ಳಸಾಗಣೆ: ಇದರಿಂದ ಗಂಡು ಆನೆಗಳ ಜನಸಂಖ್ಯೆ ಕುಗ್ಗುತ್ತಿದೆ.
- ಸೆರೆ ಹಿಡಿದ ಆನೆಗಳ ದುರಸ್ಥಿತಿ: ಅನೇಕ ಆನೆಗಳು ಸೆರೆ ಹಿಡಿದು ಪಳಗಿಸಿದ ನಂತರ ಧಾರ್ಮಿಕ ಉತ್ಸವಗಳು ಅಥವಾ ಪ್ರವಾಸೋದ್ಯಮಕ್ಕಾಗಿ ದುರುಪಯೋಗಕ್ಕೊಳಗಾಗುತ್ತಿವೆ.

### ಪರಿಸರ ವಿಜ್ಞಾನದಲ್ಲಿ ಆನೆಗಳ ಪಾತ್ರ

ಆನೆಗಳು ಪರಿಸರ ಇಂಜಿನಿಯರ್‌ಗಳು ಎಂದು ಕರೆಯಲ್ಪಡುತ್ತವೆ. ಅವು ಸಸ್ಯಗಳ ಬೀಜ ಪ್ರಸರಣ, ನೀರಿನ ಮೂಲಗಳನ್ನು ರಕ್ಷಣೆ ಮತ್ತು ಕಾಡು ಪುನರುಜ್ಜೀವನಕ್ಕೆ ಸಹಾಯ ಮಾಡುವ ಮೂಲಕ ಜೀವವೈವಿಧ್ಯತೆಯನ್ನು ಕಾಪಾಡುತ್ತವೆ. ಆವುಗಳ ಸಂಖ್ಯೆ ಕ್ಷೀಣಿಸುವುದು ಇಡೀ ಪರಿಸರ ವ್ಯವಸ್ಥೆ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ.

### ಆನೆ ಸಂರಕ್ಷಣೆಗೆ ಜಾರಿಯಾಗಿರುವ ಕ್ರಮಗಳು

- ಪ್ರಾಜೆಕ್ಟ್ ಎಲಿಫೆಂಟ್ (1992): ಆನೆ ಸಂರಕ್ಷಣೆಗೆ ಕೇಂದ್ರ ಸರ್ಕಾರದಿಂದ ಚಾಲನೆ.
- ಆನೆ ಕಾರಿಡಾರ್‌ಗಳ ಅಭಿವೃದ್ಧಿ: ವಲಸೆ ಮಾರ್ಗಗಳನ್ನು ಸುರಕ್ಷಿತಗೊಳಿಸಲು 40 ಕ್ಕೂ ಹೆಚ್ಚು ಕಾರಿಡಾರ್‌ಗಳು ನಿರ್ಮಾಣವಾಗಿವೆ.
- ಸಮುದಾಯ ಜಾಗೃತಿ ಕಾರ್ಯಕ್ರಮಗಳು: ಗ್ರಾಮೀಣ ಸಮುದಾಯಗಳಿಗೆ ಆನೆಗಳ ಮಹತ್ವ ಮತ್ತು ಸಹಬಾಳ್ವೆ ಕುರಿತು ಶಿಕ್ಷಣ.
- ಬಂಧಿತ ಆನೆಗಳ ಹಿತ ಚಿಂತನೆ: ಆಶ್ರಯ ಕೇಂದ್ರಗಳು, ಪ್ರವಾಸೋದ್ಯಮದ ಉತ್ತೇಜನ.
- ಪ್ರತಿಯೊಬ್ಬರೂ ನೀಡಬಹುದಾದ ಕೊಡುಗೆ: ಸಾಮಾಜಿಕ ಮಾಧ್ಯಮದಲ್ಲಿ ಜಾಗೃತಿ ಹಂಚಿಕೊಳ್ಳುವುದು. ಸಂರಕ್ಷಣಾ ಸಂಸ್ಥೆಗಳಿಗೆ ದಾನ ಅಥವಾ ಸ್ವಯಂಸೇವಕ ಸೇವೆ. ಪರಿಸರ ಪ್ರವಾಸೋದ್ಯಮ ಆಯ್ಕೆ. ನೀತಿ ರೂಪಿಸುವವರಿಗೆ ಮನವಿ ಪತ್ರ. ಆನೆ ಪ್ರದೇಶಗಳಲ್ಲಿ ಇಕೋ-ಫ್ರೆಂಡ್ಲಿ ಬದುಕುಳಿವು ಕ್ರಮಗಳನ್ನು ಅನುಸರಿಸುವುದು.

### ಆನೆಗಳ ಸಂರಕ್ಷಣೆಯ ಅಗತ್ಯ

ಆನೆಗಳ ಸಂಖ್ಯೆ ಬೇಟೆ, ಆವಾಸ ಸ್ಥಾನದ ನಷ್ಟ, ಮಾನವ-ಆನೆ ಸಂಘರ್ಷ ಮತ್ತು ಸೆರೆಯಲ್ಲಿರುವ ಆನೆಗಳ ಶೋಷಣೆಯಿಂದ ಅವುಗಳ ಸಂಖ್ಯೆ ಕ್ಷೀಣಿಸುತ್ತಿದೆ. ಆಫ್ರಿಕಾ ಹಾಗೂ ಏಷಿಯಾ ಎರಡೂ ಖಂಡಗಳಲ್ಲಿ ಈ ಸಮಸ್ಯೆ ಗಂಭೀರವಾಗಿದೆ. ಭಾರತದಲ್ಲಿ ಎಲಿಫಾಸ್ ಮ್ಯಾಕ್ಸಿಮಸ್ ಎಂಬ ಪ್ರಭೇದವು ಅಳಿವಿನಂಚಿನಲ್ಲಿರುವ ಪ್ರಜಾತಿಯಾಗಿ ಕೆಂಪು ಪಟ್ಟಿಯಲ್ಲಿ ನೊಂದಾಯಿತವಾಗಿದೆ.

### ಭಾರತೀಯ ಸಂಸ್ಕೃತಿಯಲ್ಲಿ ಆನೆಗಳ ಸ್ಥಾನ

ಗಣೇಶನ ರೂಪದಲ್ಲಿ ಆನೆಗಳು ಬುದ್ಧಿವಂತಿಕೆ ಮತ್ತು ದೈವಿಕ ಶಕ್ತಿಯ ಸಂಕೇತವಾಗಿವೆ. ಕೇರಳ, ಕರ್ನಾಟಕ, ತಮಿಳುನಾಡುಗಳಲ್ಲಿ ದೇವಾಲಯದ ಉತ್ಸ ವಗಳಲ್ಲಿ ಆನೆಗಳು ಪ್ರಮುಖ ಪಾತ್ರವಹಿಸುತ್ತವೆ. ಈ ಸಾಂಸ್ಕೃತಿಕ ಸಂಬಂಧವು ಆನೆಗಳ ಸಂರಕ್ಷಣೆಗೆ ಭಾವನಾತ್ಮಕ ರೂಲ್ ನೀಡಿದೆ.

## ಇತಿಹಾಸದಲ್ಲಿ ಈ ದಿನ

### ಏಪ್ರಿಲ್ 16

ಏಪ್ರಿಲ್ 16 ರಂದು ಕೆಲವು ದೇಶಗಳಲ್ಲಿ ಸೇವ್ ದಿ ಎಲಿಫೆಂಟ್ ಡೇ (ಆನೆಗಳನ್ನು ರಕ್ಷಿಸುವ ದಿನ) ಮತ್ತು ನ್ಯಾಷನಲ್ ಲೈಬ್ರರಿಯನ್ ಡೇ (ರಾಷ್ಟ್ರೀಯ ಗ್ರಂಥಪಾಲಕರ ದಿನ) ಆಚರಿಸಲಾಗುತ್ತದೆ.

**1457 ಮೆಗಿದ್ದೋ ಕದನ:** ಇತಿಹಾಸದಲ್ಲಿ ದಾಖಲಾದ ಮೊದಲ ಕದನವೆಂದು ಪರಿಗಣಿತವಾದ ಮೆಗಿದ್ದೋ ಕದನ ಈ ದಿನ ನಡೆಯಿತು.

**1746 ಕಲ್ಲೊಡನ್ ಕದನ:** ಸ್ಕಾಟ್ಲೆಂಡ್‌ನಲ್ಲಿ ಜಾಕೋಬೈಟ್‌ಗಳು ಮತ್ತು ಬ್ರಿಟಿಷ್ ಹನೋವರಿಯನ್ ಸೈನ್ಯದ ನಡುವೆ ಕಲ್ಲೊಡನ್ ಕದನ ನಡೆಯಿತು. ಇದು ಜಾಕೋಬೈಟ್ ದಂಗೆಯನ್ನು ಕೊನೆಗೊಳಿಸಿತು.

**1853 ಭಾರತದಲ್ಲಿ ಮೊದಲ ರೈಲು:** ಭಾರತದಲ್ಲಿ ಮೊದಲ ಪ್ರಯಾಣಿಕ ರೈಲು ಸೇವೆ ಬಾಂಬೆ (ಮುಂಬೈ) ಯಿಂದ ಥಾಣೆಗೆ ಆರಂಭವಾಯಿತು. ಇದು ಭಾರತೀಯ ರೈಲ್ವೆ ಇತಿಹಾಸದಲ್ಲಿ ಮಹತ್ವದ ಘಟನೆಯಾಗಿದೆ.

**1917 - ಲೆನಿನ್‌ರ ಏಪ್ರಿಲ್ ಥೀಸಿಸ್:** ರಷ್ಯಾದ ಕ್ರಾಂತಿಕಾರಿ ವ್ಲಾಡಿಮಿರ್ ಲೆನಿನ್ ತಮ್ಮ ಏಪ್ರಿಲ್ ಥೀಸಿಸ್‌ನ್ನು ಪ್ರಕಟಿಸಿದರು. ಇದು ರಷ್ಯಾದ ಕ್ರಾಂತಿಯಲ್ಲಿ ಸೋವಿಯತ್‌ಗಳಿಗೆ ಅಧಿಕಾರ ಕೊಡುವಂತೆ ಕರೆ ನೀಡಿತು.

**1919 ಗಾಂಧೀಜಿ ಉಪವಾಸ:** ಮಹಾತ್ಮ ಗಾಂಧೀಜಿ ರೌಲಟ್ ಕಾಯ್ದೆಯ ವಿರುದ್ಧ ರಾಷ್ಟ್ರವ್ಯಾಪಿ ಪ್ರಾರ್ಥನೆ ಮತ್ತು ಉಪವಾಸ ದಿನವನ್ನು ಆಚರಿಸಿದರು.

**1943 ಎಲ್‌ಎಸ್‌ಡಿ ಆವಿಷ್ಕಾರ:** ಸ್ವಿಜರ್‌ಲ್ಯಾಂಡ್‌ನ ರಸಾಯನಶಾಸ್ತ್ರಜ್ಞ ಆಲ್ಬರ್ಟ್ ಹಾಫ್‌ಮನ್ ಆಕಸ್ಮಿಕವಾಗಿ ಎಲ್‌ಎಸ್‌ಡಿ (ಲೈಸರ್ಜಿಕ್ ಆಸಿಡ್ ಡೈಥೈಲಮೈಡ್) ಔಷಧದ ಮಾನಸಿಕ ಪರಿಣಾಮಗಳನ್ನು ಕಂಡುಕೊಂಡರು.

**1966 ನಂದಲಾಲ್ ಬೋಸ್ ನಿಧನ:** ಭಾರತದ ಪ್ರಮುಖ ಕಲಾವಿದರಾದ ನಂದಲಾಲ್ ಬೋಸ್, ಬಂಗಾಳ ಕಲಾ ಶಾಲೆಯ ಪ್ರಮುಖ ವ್ಯಕ್ತಿಯಾಗಿದ್ದವರು, ಈ ದಿನ ನಿಧನರಾದರು.

**1972 ಅಪೋಲೋ 16 ಉಡಾವಣೆ:** ನಾಸಾದ ಅಪೋಲೋ 16 ಬಾಹ್ಯಾಕಾಶ ನೌಕೆ ಚಂದ್ರನ ಮೇಲೆ ಇಳಿಯಲು ಫ್ಲೋರಿಡಾದ ಕೇಪ್ ಕೆನಾವೆರಲ್‌ನಿಂದ ಉಡಾವಣೆಯಾಯಿತು.

**2003 ಮೈಕಲ್ ಜೋರ್ಡಾನ್‌ನ ಕೊನೆಯ ಎನ್‌ಬಿಎ ಪಂದ್ಯ:** ಬಾಸ್ಕೆಟ್‌ಬಾಲ್ ದಿಗ್ಗಜ ಮೈಕಲ್ ಜೋರ್ಡಾನ್ ತಮ್ಮ ಕೊನೆಯ ಎನ್‌ಬಿಎ ಪಂದ್ಯವನ್ನು ಆಡಿದರು.

**ಜನನ: 1889:** ಚಾರ್ಲಿ ಚಾಪ್ಲಿನ್, ಇಂಗ್ಲಿಷ್ ಸಿನಿಮಾ ನಟ ಮತ್ತು ಚಿತ್ರನಿರ್ಮಾಪಕ. **1927:** ಪೋಪ್ ಬೆನೆಡಿಕ್ಟ್, ಕ್ಯಾಥೋಲಿಕ್ ಚರ್ಚ್‌ನ 265ನೇ ಪೋಪ್.

**ನಿಧನ: 1966:** ನಂದಲಾಲ್ ಬೋಸ್, ಭಾರತೀಯ ಕಲಾವಿದ.

**2018:** ಹ್ಯಾರಿ ಆಂಡರ್ಸನ್, ಅಮೆರಿಕಾದ ನಟ ಮತ್ತು ಜಾದೂಗಾರ.

# ಮೆಗಿದ್ದೋ ಕದನ: ಇತಿಹಾಸದ ಮೊದಲ ದಾಖಲಿತ ಯುದ್ಧದ ಬಗ್ಗೆ ಗೊತ್ತಾ?

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಕ್ರಿ.ಪೂ. 15ನೇ ಶತಮಾನದಲ್ಲಿ ಈಜಿಪ್ಟ್‌ನ ಹೊಸ ಸಾಮ್ರಾಜ್ಯವು ತನ್ನ ಶಕ್ತಿಯ ಉತ್ತುಂಗದಲ್ಲಿತ್ತು. ಫಾರೋ ಥುಟ್‌ಮೋಸ್ ತನ್ನ ಸಾಮ್ರಾಜ್ಯದ ಗಡಿಗಳನ್ನು ವಿಸ್ತರಿಸಲು ಮತ್ತು ಲೆವಂಟ್ ಪ್ರದೇಶದಲ್ಲಿ ಪ್ರಾಬಲ್ಯ ಕಾಯ್ದುಕೊಳ್ಳಲು ಬದ್ಧನಾಗಿದ್ದ. ಈ ಪ್ರದೇಶವು ಕಾನಾನೈಟ್ ರಾಜರ ಒಕ್ಕೂಟದಿಂದ ವಿಶೇಷವಾಗಿ ಕಾದೇಶ್‌ನ ರಾಜನ ನೇತೃತ್ವದಲ್ಲಿ ಈಜಿಪ್ಟ್‌ನ ಆಧಿಪತ್ಯಕ್ಕೆ ಸವಾಲೊಡ್ಡಿತು. ಈ ಒಕ್ಕೂಟಕ್ಕೆ ಮಿಟಾನಿ ಸಾಮ್ರಾಜ್ಯದಿಂದ ಬೆಂಬಲವಿತ್ತು ಅದು ಈಜಿಪ್ಟ್‌ನ ಪ್ರಮುಖ ಸ್ಪರ್ಧಿಯಾಗಿತ್ತು.

ಮೆಗಿದ್ದೋ, ಜೆಜ್ರೀಲ್ ಕಣಿವೆಯ ಪ್ರವೇಶ ದ್ವಾರದಲ್ಲಿ ನೆಲೆಗೊಂಡಿರುವ ಕೋಟೆ-ನಗರವಾಗಿದ್ದು, ವ್ಯಾಪಾರ ಮಾರ್ಗಗಳನ್ನು ನಿಯಂತ್ರಿಸುವ ತಂತ್ರದ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾಗಿತ್ತು.



### ಕದನಕ್ಕೆ ಕಾರಣಗಳು

ಕಾನಾನೈಟ್ ರಾಜರ ಒಕ್ಕೂಟವು ಮಿಟಾನಿಯ ಬೆಂಬಲದಿಂದ ಈಜಿಪ್ಟ್ ವಿರುದ್ಧ ದಂಗೆ ಎತ್ತಿತು. ಈಜಿಪ್ಟ್‌ನ ಲೆವಂಟ್ ಪ್ರದೇಶದ ಪ್ರಾಬಲ್ಯವನ್ನು ಕುಂದಿಸಲು ಈ ದಂಗೆಯ ಉದ್ದೇಶಿತವಾಗಿತ್ತು. ಥುಟ್‌ಮೋಸ್ ತನ್ನ ಮಾತೃ-ರಾಣಿ ಹ್ಯಾಟ್‌ಶೆಪ್‌ಸುಟ್‌ನ ಸಹ-ಆಡಳಿತದಿಂದ ಮುಕ್ತನಾದ ಬಳಿಕ, ಈ ದಂಗೆಯನ್ನು ದಮನಿಸಿ ಸಾಮ್ರಾಜ್ಯ ಶಕ್ತಿಯನ್ನು ಪುನಃ ಸ್ಥಾಪಿಸಲು ಮುಂದಾದನು. ಮೆಗಿದ್ದೋ ಈ ದಂಗೆಯ ಕೇಂದ್ರವಾಗಿದ್ದರಿಂದ, ಅದನ್ನು ವಶಪಡಿಸಿಕೊಳ್ಳುವುದು ಪ್ರಮುಖ ಗುರಿಯಾಗಿತ್ತು.

### ಕದನದ ಕಾರ್ಯತಂತ್ರ

ಮೆಗಿದ್ದೋ ತಲುಪಲು ಮೂರು ಮಾರ್ಗಗಳು ಇದ್ದವು: ಉತ್ತರದ ಮಾರ್ಗ: ದೀರ್ಘ ಆದರೆ ಶತ್ರು ದಾಳಿಗೆ ಅಸುರಕ್ಷಿತ. ದಕ್ಷಿಣದ ಮಾರ್ಗ: ಸುರಕ್ಷಿತ ಆದರೆ ಸಮಯವರ್ಧಿತ. ಆರಾದ್‌ನ ಕಿರಿದಾದ ಕಣಿವೆ: ಅಪಾಯಕಾರಿ ಆದರೆ ಆಶ್ಚರ್ಯಕಾರಿ ತಂತ್ರಕ್ಕೆ ಸಾಧ್ಯತೆ.

ಥುಟ್‌ಮೋಸ್ , ತನ್ನ ಸೇನಾಧಿಕಾರಿಗಳ ಸಲಹೆಗೆ ವಿರೋಧವಾಗಿ, ಅಪಾಯಕಾರಿಯಾದ ಕಿರಿದಾದ ಕಣಿವೆಯ ಮಾರ್ಗವನ್ನು ಆಯ್ಕೆ ಮಾಡಿದನು. ಈ ನಿರ್ಧಾರವು ಕಾನಾನೈಟ್ ಸೈನ್ಯವನ್ನು ಅಚ್ಚರಿಗೊಳಿಸಿತು. ಈಜಿಪ್ಟ್ ಸೈನ್ಯವು ಕಣಿವೆಯ ಮೂಲಕ ಮೆಗಿದ್ದೋ ಬಳಿಯ ತೆರೆದ ಮೈದಾನವನ್ನು ತಲುಪಿತು ಮತ್ತು ಯುದ್ಧ ಆರಂಭವಾಯಿತು.

### ಥುಟ್ ಮೋಸ್ ಎಂಬ ಪ್ರಾಚೀನ ನೆಪೋಲಿಯನ್

ಈ ಗೆಲುವು ಶಾಶ್ವತ ಶಾಂತಿಯನ್ನಿಲ್ಲದಿದ್ದರೂ, ಥುಟ್‌ಮೋಸ್‌ರ ನಾಯಕತ್ವ ಪ್ರಾಚೀನ ಇತಿಹಾಸದಲ್ಲಿ ಅನನ್ಯವಾಗಿದೆ. ಅವನ 17 ಯುದ್ಧ ಅಭಿಯಾನಗಳು ಈಜಿಪ್ಟ್‌ನ ಶಕ್ತಿಯನ್ನು ಸುಸ್ಥಿರಗೊಳಿಸಿತು. ಅವನನ್ನು ಪ್ರಾಚೀನ ಜಗತ್ತಿನ ನೆಪೋಲಿಯನ್ ಎಂದು ಕರೆಯಲಾಯಿತು.

ಇಂದು, ಮೆಗಿದ್ದೋ (ತೆಲ್ ಮೆಗಿದ್ದೋ) ಯುನೆಸ್ಕೋ ವಿಶ್ವ ಪರಂಪರೆಯ ಪುರಾತತ್ವ ತಾಣವಾಗಿದೆ. ಇದು ಪುರಾತತ್ವಶಾಸ್ತ್ರಜ್ಞರು, ಇತಿಹಾಸಕಾರರು ಮತ್ತು ಆಸಕ್ತ ಜನರಿಗೆ ಮಾನವ ಇತಿಹಾಸದ ಆರಂಭಿಕ ಯುದ್ಧ ಅಧ್ಯಯನಕ್ಕೆ ಅತ್ಯಂತ ಪ್ರಾಸಂಗಿಕವಾದ ಸ್ಥಳವಾಗಿದೆ.

ಮೆಗಿದ್ದೋ ಕದನವು ಕೇವಲ ಸೇನಾ ಗೆಲುವು ಮಾತ್ರವೇ ಅಲ್ಲ ಇದು ರಾಜಕೀಯ ತಂತ್ರ, ಧೈರ್ಯದ ನಿರ್ಧಾರ, ಶಿಸ್ತುಬದ್ಧ ಸೇನೆಯ ಶಕ್ತಿಯ ಸಂಕೇತ. ಈ ಕದನವು ಪ್ರಾಚೀನ ಜಗತ್ತಿನ ರಾಜಕೀಯ ಭೂಪಟವನ್ನು ರೂಪಿಸಿದ ಮಹತ್ವದ ಘಟನೆಯಾಗಿ ಇತಿಹಾಸದಲ್ಲಿ ಉಳಿದಿದೆ.

> ಮೆಗಿದ್ದೋ ಕದನ (Battle of Megiddo) ಇತಿಹಾಸದಲ್ಲಿ ದಾಖಲಾದ ಮೊದಲ ಯುದ್ಧವೆಂದು ಪರಿಗಣಿತವಾಗಿದೆ. ಇದು ಕ್ರಿ.ಪೂ. 1457ರ ಏಪ್ರಿಲ್ 16 ರಂದು (ಕೆಲವು ಐತಿಹಾಸಿಕ ಲೆಕ್ಕಾಚಾರಗಳ ಪ್ರಕಾರ) ಈಜಿಪ್ಟ್‌ನ ಫಾರೋ ಥುಟ್‌ಮೋಸ್ ಮತ್ತು ಕಾನಾನೈಟ್ ರಾಜರ ಒಕ್ಕೂಟದ ನಡುವೆ ಪ್ರಾಚೀನ ಕಾನಾನ್‌ನ ಮೆಗಿದ್ದೋ ಪ್ರದೇಶದಲ್ಲಿ ನಡೆಯಿತು. ಈ ಕದನವು ಕೇವಲ ಸೇನಾ ಸಂಘರ್ಷವಲ್ಲದೆ, ರಾಜಕೀಯ, ಆರ್ಥಿಕ ಮತ್ತು ಭೌಗೋಳಿಕ ತಂತ್ರಗಾರಿಕೆಯ ದೃಷ್ಟಿಯಿಂದ ಮಹತ್ವದ ಘಟನೆಯಾಗಿತ್ತು.

### ಐತಿಹಾಸಿಕ ಮಹತ್ವ

ಮೊದಲ ದಾಖಲಿತ ಯುದ್ಧ: ಕಾರ್ನಾಕ್ ದೇವಾಲಯದ ಶಿಲಾಲೇಖಗಳಲ್ಲಿ ವಿವರಿತವಾಗಿದೆ. ಅಪಾಯದ ಮಾರ್ಗದ ಆಯ್ಕೆಯು ಶ್ರೇಷ್ಠ ತಂತ್ರವಾಗಿ ಪರಿಗಣಿಸಲ್ಪಟ್ಟಿದೆ. ಮೆಗಿದ್ದೋ ತಂತ್ರದ ದೃಷ್ಟಿಯಿಂದ ಪ್ರಾಚೀನ ಯುದ್ಧಗಳ ಪ್ರಮುಖ ಸ್ಥಳ. ಈಜಿಪ್ಟ್‌ನ ವ್ಯಾಪ್ತಿಯನ್ನು ಉತ್ತರ ಸಿರಿಯದವರೆಗೆ ಈ ಯುದ್ಧ ವಿಸ್ತರಿಸಿತು.

### ಗೆದ್ದ ಈಜಿಪ್ಟ್

ಮುತ್ತಿಗೆ ಕೊನೆಗೆ ಫಲ ನೀಡಿತು ಕಾನಾನೈಟ್ ಒಕ್ಕೂಟ ಶರಣಾಯಿತು. ಮೆಗಿದ್ದೋ ಈಜಿಪ್ಟ್‌ನ ವಶಕ್ಕೆ ಬಂತು. ಈ ಗೆಲುವಿನಿಂದ ಲೆವಂಟ್‌ನಲ್ಲಿ ಈಜಿಪ್ಟ್‌ನ ಪ್ರಭಾವ ಪುನಃ ಸ್ಥಾಪನೆಗೊಂಡಿತು. ಮಿಟಾನಿ ಮತ್ತು ಕಾದೇಶ್ ಪ್ರಭಾವ ತಾತ್ಕಾಲಿಕವಾಗಿ ಕುಂದಿತು. ಈಜಿಪ್ಟ್‌ನ ರಾಜಕೀಯ ಹಾಗೂ ಆರ್ಥಿಕ ಶಕ್ತಿ ಮತ್ತಷ್ಟು ಬಲವಂತಗೊಂಡಿತು.

### ಯುದ್ಧದ ಘಟನೆಗಳು

ಥುಟ್‌ಮೋಸ್‌ರ ರಥಗಳು ಮತ್ತು ಕಾಲಾಳು ಸೈನಿಕರು ಶಿಸ್ತುಬದ್ಧವಾಗಿ ಕಾನಾನೈಟ್ ಸೈನ್ಯದ ಮೇಲಕ್ಕೆ ದಾಳಿ ನಡೆಸಿದರು. ಶತ್ರು ಸೇನೆಯ ಸಾಲುಗಳನ್ನು ಒಡೆದುಹಾಕಿ ಅವರನ್ನು ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾದರು. ಕಾನಾನೈಟ್ ಸೈನಿಕರು ಮೆಗಿದ್ದೋ ಕೋಟೆಯ ಒಳಗೆ ಓಡಿದರು. ಈಜಿಪ್ಟಿಯನ್ನರು ಕೋಟೆಗೆ ಏಳು ತಿಂಗಳ ಮುತ್ತಿಗೆ ಹಾಕಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248